ಏನು ಮಾಡಬೇಕೋ ತಿಳಿಯದೆ ಅವನತ್ತಲೇ ನೋಡುತ್ತ ಕುಳಿತುಕೊಂಡೆ.

ವಾಸ್ತವವಾಗಿ ಈ ಕ್ಷಣದವರೆಗೂ ನಾನು ಅವನೊಂದಿಗೆ ಏನೂ ಮಾತನಾಡಿದ್ದಿಲ್ಲ. ಅವನು ಕೂಡಾ ನನ್ನನ್ನು ಅಂಥಾ ದೊಡ್ಡದಾಗಿ ಮಾತನಾಡಿಸಿಯೂ ಇಲ್ಲ. ಸಾಮಾನ್ಯವಾಗಿ ಹತ್ತು ಹನ್ನೆರಡು ವರ್ಷದ ಮಕ್ಕಳು ಕಾಣಿಸಿದರೆ ಅವರೊಂದಿಗೆ ಮಾತಾಡದೆ ಇರುವುದೆಂದರೆ ತುಂಬಾ ಕಷ್ಟದ ಕೆಲಸ ನನಗೆ. ಇವನಿಗೆ ಹನ್ನೆರಡು ವರ್ಷ ಇದ್ದಿರಬಹುದು. ಆದರೆ ಬೇರೆ ಥರಾನೇ ಇದ್ದಾನೆ. ಆ ವಯಸ್ಸಿಗೇ ತುಂಬಾ ದೊಡ್ಡವನಂತೆ ಕಾಣಿಸುತ್ತಾನೆ – ಸ್ವಲ್ಪ ಸಲಿಗೆ ತೆಗೆದುಕೊಂಡು ಮುಟ್ಟಬೇಕೆಂದರೂ ಭಯವೆನ್ನಿಸುವಷ್ಟು.

'ನನ್ನನ್ನ ನಮ್ಮ ಆಫೀಸ್ ಹತ್ತಿರ ಇಳಿಸ್ತೀರಾ. ನನ್ನ ಬೈಕ್ ಅಲ್ಲೇ ಇದೆ' ಅಂದೆ ಆಕೆಗೆ.

ಆದರೆ ಆಕೆ ನನ್ನ ಮಾತು ಕೇಳಿಸದವಳಂತೆ ಕಾರನ್ನು ಚೆಕ್‌ಪೋಸ್ಟ್‌ನಿಂದ ಫಿಲ್ಮ್‌ನಗರ್ ಕಡೆ ತಿರುಗಿಸಿದಳು. ಅಲ್ಲಿಂದ ಲೋಟಸ್ ಪಾಂಡ್ ಕಡೆ ತಿರುಗಿಸಿ ಮಾತಿಗಾರಂಭಿಸುವವಳಂತೆ ಕಾರನ್ನು ತುಂಬಾ ಸ್ಲೋ ಮಾಡಿದಳು. ಆ ಸ್ಪೀಡಿನಲ್ಲಿ ಆ ರೂಟಿನಿಂದ ಸುತ್ತು ತಿರುಗಿ ನಮ್ಮ ಆಫೀಸಿಗೆ ಸೇರಬೇಕೆಂದರೆ ತುಂಬಾ ಸಮಯ ಬೇಕಾಗುತ್ತದೆ.

ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಇಲ್ಲದ ಕಿರಿಕಿರಿಯಲ್ಲಿ ಸಿಕ್ಕಿಹಾಕಿಕೊಂಡೆನಾ ಅಂದುಕೊಂಡೆ.

ಕಳೆದ ತಿಂಗಳಿನವರೆಗೆ ನನಗೆ ಆಕೆಯ ಮುಖ ಮೂತಿ ಕೂಡ ಗೊತ್ತಿರಲಿಲ್ಲ. ನನ್ನ ಹೆಂಡತಿಗೆ ಒಂದು ಸಣ್ಣ ಚೆಕಪ್ ಮಾಡಿಸಲೆಂದು ಒಂದು ಕಾರ್ಪೋರೇಟ್ ಹಾಸ್ಪಿಟಲ್‌ಗೆ ಹೋಗಿದ್ದೆವು. ಅಲ್ಲಿ ಆಕೆ ಗೈನಕಾಲಜಿಸ್ಟ್ ಆಗಿ ಕೆಲಸ ಮಾಡುತ್ತಾಳೆ. ಕಣ್ಣಿಂದ ನೋಡಿ ಕೈಯಿಂದ ಔಷಧಿ ಬರೆದುಕೊಡುವ ಡಾಕ್ಟರುಗಳಂತಲ್ಲದೆ ವ್ಯವಧಾನದಿಂದ ನಗುತ್ತ ನಮ್ಮೊಂದಿಗೆ ಮಾತಾಡಿದಳು. ನನ್ನ ಹೆಂಡತಿಗೆ ಇದ್ದ ಅನುಮಾನವನ್ನು ನಿವಾರಿಸಿದಳು. ಆಮೇಲೆ ಮಾತಲ್ಲೇ ನನ್ನ ವಿವರಗಳನ್ನು ಕೂಡ ತಿಳಿದುಕೊಂಡಳು.

ಆದರೆ ಅವನ್ನು ಬೆಳೆಸಲಿಲ್ಲ. ಮರುದಿನ ಆಫೀಸಿಗೆ ಫೋನು.

'ನಾನೂರಿ ಡಾಕ್ಟರ್ ಲಕ್ಷ್ಮಿ' ಅಂದಳು ಕಿಲಕಿಲ ನಗುತ್ತ.

ಆಮೇಲೆ ಏನೋ ಹೇಳಲು ಉದ್ವೇಗಪಡುತ್ತಿರುವವಳಂತೆ ತಡೆದು, 'ನಿನ್ನೆ ಇಮ್ಮೀಡಿಯೇಟ್ ಆಗಿ ಹೇಗೆ ರಿಯಾಕ್ಟ್ ಮಾಡಬೇಕೋ ಗೊತ್ತಾಗಲಿಲ್ಲಾರೀ. ಹಾಸ್ಪಿಟಲು. ಹೊರಗೆ ಪೇಶೆಂಟ್ಸ್ ಕಾಯ್ತಿದ್ದರು. ಒಂದು ರೀತಿಯಲ್ಲಿ ನಿಮ್ಮ ಮನೆಯವರ ಎದುರಿಗೆ ನೇರವಾಗಿ ಹೇಳೋಕೆ ಸ್ವಲ್ಪ ನಾಚಿಕೆಯೂ ಅನಿಸಿತು ಅಂದ್ಕೊಳ್ಳಿ. ವಿಷಯ ಏನಂದ್ರೆ ನಾನು ನಿಮ್ಮ ಡೈಹಾರ್ಡ್ ಫ್ಯಾನ್ ಕಣ್ರೀ. ನಗಬೇಡಿ. ನಿಜ. ತುಂಬಾ ದಿನಗಳಿಂದ ನಿಮ್ಮನ್ನು ಒಂದು ಸಲವಾದರೂ ಭೇಟಿಯಾಗೇಕು ಅಂದ್ಕೊಂಡಿದ್ದೆ. ಅಂಥಾದ್ದು ನೀವೇ ಇನ್ಸಿಡೆಂಟಲ್ ಆಗಿ ನನ್ನ ಹತ್ತಿರ ಬರುವಂತಾಗಿದ್ದು… ಐ ವಾಸ್ ಥ್ರಿಲ್ಡ್' ಅಂದು ತನ್ನಷ್ಟಕ್ಕೆ ತಾನೇ ಗರ್ವಪಡುತ್ತ ನನ್ನ ಕತೆಗಳನ್ನು ನನಗೇ ನೆನಪು ಮಾಡಿಕೊಡುತ್ತ ತುಂಬಾ ಹೊತ್ತು ಮಾತಾಡಿ ಇಟ್ಟುಬಿಟ್ಟಳು.

ಆಮೇಲೆ ಮತ್ತೊಂದೆರಡು ಮೂರು ಸಲ ಮಾಡಿದಳು.

ನಿಧಾನವಾಗಿ ಆಕೆಗೆ ಸಂಬಂಧಿಸಿದ ಒಂದೆರಡು ವಿವರಗಳು ಗೊತ್ತಾದವು.

ಆಕೆಯೂ ನಮ್ಮ ಕಡೆಯವಳೇ. ನೆಲ್ಲೂರು ಜಿಲ್ಲೆ. ಆಕೆಯದು ಬೇರೆ ಊರು. ಆ ಪ್ರಾದೇಶಿಕ ಅಭಿಮಾನ ತುಸು ಹೆಚ್ಚಾಗಿಯೇ ಕೆಲಸ ಮಾಡುತ್ತಿರುವಂತಿದೆ ಅನಿಸಿತಾದರೂ ಅದನ್ನೂ ಮೀರಿದ ಕೆಲಸವೇನೋ ನನ್ನೊಂದಿಗೆ ಇರುವುದಾಗಿ ಕೂಡ ಅರ್ಥವಾಯಿತು.

'ನಮ್ಮ ಮಗನಿಗೆ ಒಬ್ಬ ಒಳ್ಳೆ ಮ್ಯೂಸಿಕ್ ಟೀಚರ್ ಬೇಕೂರಿ. ಪತ್ರಿಕೆಯಲ್ಲಿ ಕೆಲಸ ಮಾಡ್ತೀರಲ್ಲ